'ಸುಮಾ ಕಳಸಾಪುರ'

# ಪ್ರಚಾರ ಪ್ರಿಯರು

"ಇತ್ತೀಚಿನ ದಿನಗಳಲ್ಲಿ ಪ್ರಚಾರ ಬಯಸ್ದೆ ಇರೋ ಜನಗಳೇ ಇಲ್ಲ ಅನ್ಸುತ್ತೆ. ಹುಟ್ಟಿದ ಮಗುವಿನಿಂದ ಹಿಡಿದು ಹಣ್ಣು ಮುದುಕರವರೆಗೂ ತಮ್ಮ ಹೆಸರು, ಗುರುತು ನಾಲ್ಕಾರು ಜನರಿಗೆ ಗೊತ್ತಾಗ್ಬೇಕು ಅನ್ನೋ ಹಂಬಲ ಜಾಸ್ತಿ. ಅದಕ್ಕೋಸ್ಕರ ಅವ್ರು ಮಾಡಿದ ಘನಕಾರ್ಯಗಳು ಅಷ್ಟರಲ್ಲೇ ಇರುತ್ತೆ.'' ಈ ಮಾತು ಬಂದದ್ದು ಮಟ ಮಟ ಮಧ್ಯಾಹ್ನ ಆ ಸುಡೋ ಬಿಸಿಲಲ್ಲಿ ಉಧೋಂತ ಬಂದ ನನ್ನ ಗೆಳತಿ ಬಾಯಿಂದ. ''ಇದೇನಾಯ್ತೇ... ಸ್ವಲ್ಪ ಬಿಡಿಸಿ ಹೇಳು'' ಅಂದೆ. ಆಗ ಹೇಳಿದ್ಲು, ''ನಾನು ನಿಮ್ಮನೆಗೆ ಬರೋವಾಗ ಒಂದು ಫ್ಲೆಕ್ಸ್ ನೋಡ್ದೆ, ಮಾರಿಜಾತ್ರೆ ಪ್ರಯುಕ್ತ ಶುಭಾಶಯ ಹೇಳೂಕೆ ಇಡೀ ತಾಂಡ್ಯಾದ ಜನರ ಫೋಟೊಗಳೆ ಇವೆ. ದೇವರ ಫೋಟೊ ಒಂದು ಮೂಲೇಲಿದ್ರೆ ಪಾಪ ಬಲಿಗೆ ಕೊಡೋ ಕುರಿಗಳ ಫೋಟೊ ಇನ್ನೊಂದು ಮೂಲೆಲಿ. ಉಳಿದ ಜಾಗ ಪೂರ್ತಿ ಇವ್ರುಗಳುದ್ದೆ. ಅದ್ರಲ್ಲಿ ಪೂರಾ ಫ್ಯಾಮಿಲಿನೇ ಇದೆ. ಇದೇನು ಹುಚ್ಚು ಮಾರಾಯ್ತಿ?''

ನನಗೂ ಹಾಗನ್ನಿಸಿದ್ದು ನಿಜ. ಹೆದ್ದಾರಿಯಿಂದ ಹಿಡಿದು ಕೊಳಕು ಕನ್ಸರ್ವೆನ್ಸಿಯವರೆಗೂ ಎಲ್ಲಿ ನೋಡಿದ್ರೂ ಈ ಬಣ್ಣ ಬಣ್ಣದ ಫ್ಲೆಕ್ಸ್‌ಗಳೇ ರಾರಾಜಿಸ್ತಿರ್ತವೆ. ಮೊನ್ನೆ ತಿಲಕ್ ನಗರಕ್ಕೆ ಹೋಗಿದ್ದಾಗ ಅಲ್ಲಿ ಕಂಡ ಒಂದು ದೃಶ್ಯ, ಅದೊಂದು ಕನ್ಸರ್ವೆನ್ಸಿ ಮಹಾದ್ವಾರ. ಕನ್ಸರ್ವೆನ್ಸಿ ಅಂದ್ಮೇಲೆ ಕೇಳೋದೇಬೇಡ, ಅದೊಂಥರ ಸಾರ್ವಜನಿಕ ಶೌಚಾಲಯವೇ ಸರಿ. ಅದರ ಎರಡೂ ಬದಿಗಳಲ್ಲಿ ಕಂಬ ನೆಟ್ಟು, ದೊಡ್ಡದೊಂದು ಫ್ಲೆಕ್ಸ್ ಹಾಕಿದ್ದರು. 'ಅಂತರ್ಗಟ್ಟಮ್ಮ ದೇವಸ್ಥಾನ. 5ನೇ ವಾರ್ಷಿಕೋತ್ಸವ, ಕುಂಭಾಭಿಷೇಕ, ಸರ್ವರಿಗೂ ಆದರದ ಸ್ವಾಗತ' ಎಂಬ ಶೀರ್ಷಿಕೆ ಅಡಿಯಲ್ಲಿ ಒಂದಿಪ್ಪತ್ತು ಮುಖಗಳು. ಆ ಏರಿಯಾದ ಮುಖಂಡರ ಜೊತೆ ಚೋಟು ಮೋಟು ಪುಢಾರಿಗಳು ಪೋಸ್ ಕೊಟ್ಟಿದ್ರು. ಆ ಫ್ಲೆಕ್ಸ್ ಕೆಳಗೊಬ್ಬ ಮಹಾಶಯ ಯಾರದೋ ಮನೆ ಗೋಡೆಗೆ ಮುಖ ಮಾಡಿ ಅಲ್ಲಿ ಅಭಿಷೇಕ ಮಾಡ್ತಿದ್ದ. ಯಾವ ಜಾಗದಲ್ಲಿ ಯಾವ ಮಾಹಿತಿ ಕೊಡಬೇಕು ಅನ್ನೊ ಪರಿಯೇ ಇರೋದಿಲ್ಲ ಈ ಜನಗಳಿಗೆ ಅನ್ನಿಸಿತ್ತು.

ಮೊದ್ಲೆಲ್ಲ ಫ್ಲೆಕ್ಸ್ ಹಾವಳಿ ಇಷ್ಟಿರ್ಲಿಲ್ಲ ಎಲ್ಲೋ ಅಲ್ಲೊಂದು ಇಲ್ಲೊಂದು. ತುಂಬಾ ವಿಶೇಷವಾದ ಕಾರ್ಯಕ್ರಮಗಳಿದ್ದರೆ